## ಅಧ್ಯಾಯ ಏಳು

# ದೇವರು ವರ ಕೊಟ್ರೂ.... (ಶ್ರೀಮತಿ ಸಂಧ್ಯಾ ಅವರ ಲೇಖನ)

## ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

ಮಾಮೂಲಿನಂತೆ ನನ್ನ ಮೊಬೈಲ್ ತೆಗೆದು ನೋಡಿದಾಗ, ನಾಳೆ "Rocky our Rani" ಸಿನಿಮಾಗೆ ಬರ್ತೀಯಾ ಅಂತ ನನ್ನ ಪ್ರೀತಿಯ ಅತ್ತಿಗೆ ಲತನಿಂದ ನನಗೊಂದು ಮೆಸೇಜ್ ಕಾದಿತ್ತು. ಎಷ್ಟು ಗಂಟೆ ಷೋಗೆ ಎಂದು ಕೇಳಬೇಕೆನಿಸಿತು. ಆದರೂ ಅದು ನನ್ನ ಪಾಲಿಗೆ ಸಮಂಜಸವಾದ ಪ್ರಶ್ನೆ ಅಲ್ಲ ಎಂದು ಭಾವಿಸಿ, ನನ್ನ ಪರಿಸ್ಥಿತಿಗೆ ಅನುಗುಣವಾಗಿ "I can, if it is after 12" ಅಂತ reply ಕಳಿಸಿದೆ. ಏಕೆಂದರೆ ಇತ್ತೀಚೆಗೆ **"ನನ್ನ** circumstance **ಸರಿಯಿಲ್ಲ".** ಅದಕ್ಕೆ ತಕ್ಕಂತೆ ನಾನು Act ಮಾಡಬೇಕಾಗಿದೆ. ಆ ದಿನ ಲತನಿಗೆ ಬೇರೆ time ಅನುಕೂಲವಾಗಿತ್ತಾದರೂ, ನನಗೆ ಅನುಕೂಲವಾಗುವ time ಗೆ ticket book ಮಾಡಿಸಿದರು, ನನ್ನ ಮೇಲಿನ ವಿಶ್ವಾಸದಿಂದ. ನನ್ನ ಕರೆದುಕೊಂಡು ಹೋಗಲು ಕಾರಿನಲ್ಲಿ ಅವರು ನನ್ನ ಮನೆಗೆ ಬಂದು ಅವರು ನನ್ನ ಕೇಳಿದ ಮೊದಲ ಪ್ರಶ್ನೆ, "ಊಟ ಮಾಡಿದೀಯಾ ಹೇಳು" ಅಂತ. ಹೀಗೆ ಕೇಳುವಾಗ, ಅವರು ಎಂದೂ ಯಾವುದನ್ನೂ, ಯಾರನ್ನೂ, ಸುಮ್ಮನೆ ಬಾಯಿಮಾತಿಗಾಗಲೀ, ತೋರಿಕೆಗಾಗಲೀ ಖಂಡಿತಾ ಕೇಳಲ್ಲ. ಬದಲಿಗೆ, ಹೃದಯಾಂತರಾಳದಿಂದ ತುಂಬು ವಿಶ್ವಾಸದಿಂದ ವಿಚಾರಿಸುವುದು ನಮ್ಮ ಅನುಭವಕ್ಕೆ ಬಂದು, ಅದೊಂದು ರೀತಿಯ ಹಿತವಾದ ಸಂತೋಷವನ್ನು ನಮ್ಮ ಮನಸ್ಸು ಅನುಭವಿಸುತ್ತದೆ. ಇಂತಹ ಸನ್ನಿವೇಶ ನನಗೆ ಸಿಕ್ಕಿರುವುದು ಲೆಕ್ಕವಿಲ್ಲದಷ್ಟು. ಆದರೂ ಅಂದು ಅವರ ಪ್ರೀತಿಯ ಮಾತಿಗೆ ಮನಸೋತು ಭಾವನಾ ಲೋಕದಲ್ಲಿ ವಿಹರಿಸಿ ಖುಷಿ ಪಡುತ್ತಿದ್ದ ನನಗೆ ಎಚ್ಚರ ನೀಡಿದ್ದು "ಊಟ ಮಾಡಿಲ್ಲದಿದ್ದರೆ ಹೇಳು ಸಂಧ್ಯಾ, ಹೋಟೆಲ್ ಗೆ ಹೋಗೋಣ, ಊಟ ಮಾಡು" ಎನ್ನುವ ಹಿತವಾದ ಮಾತುಗಳು. ಆ ದಿನ ನನ್ನ ಊಟ ಆಗಿತ್ತು. ಇಲ್ಲದಿದ್ದರೆ ಅವರು ನನಗೆ ಇಷ್ಟವಾದ ಹೋಟೆಲ್ ನಲ್ಲಿ ನನಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಧಾರಾಳವಾಗಿ ಕೊಡಿಸುತ್ತಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ. ಕಾರಣ ನನ್ನ ಅನುಭವದಲ್ಲಿ ಅವರು ಕೊಡಿಸಿರುವ ಊಟ ತಿಂಡಿಗಳು ಲೆಕ್ಕವಿಡಲಾರದಷ್ಟು. ಕೊಡಿಸಲು ಅವರು ಸದಾ ಸಿದ್ಧ. Recent ಆಗಿ ಕೂಡಾ ಕೊಡಿಸಿದ್ದಾರೆ. ಆದರೆ ಹಿಂದಿನ ದಿನಗಳಿಗೆ ಹೋಲಿಸಿದರೆ ಇಂದಿನ ದಿನಗಳಲ್ಲಿ ಅಂದಿಗಿಂತ ಇಂದು ಅವಕಾಶ ಕಡಿಮೆಯಾಗಿದೆ. ಇದಕ್ಕೆ **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ನಾವು ಪಯಣಿಸಿದ ದಾರಿಯುದ್ದಕ್ಕೂ ಅವರ ಮಾತುಗಳನ್ನು ನಾನು ತುಂಬಾ Enjoy ಮಾಡಿದೆ. ಯಾವಾಗಲೂ ಅವರ ಮಾತು ಕೇಳುವುದೆಂದರೆ ನನಗೆ ತುಂಬಾ ಇಷ್ಟ. ನಾನದನ್ನು ತುಂಬಾ Enjoy ಮಾಡ್ತೀನಿ. ಯಾವುದೇ ವಿಷಯವಾದರೂ ಅವರು ಚಟ್ ಪಟ್ ಅಂತ React ಮಾಡುವುದು, ಅದರಲ್ಲಿ Fast and Best Reaction ತುಂಬಾ Special ಆಗಿ ಇರತ್ತೆ. ಅದರಲ್ಲೂ ರಾಮಬಾಣದಂತಾ ಅವರ ಮಾತಿನಲ್ಲಿ ಹಾಸ್ಯ ಹಾಗೂ Perfect message ಎರಡೂ ಒಟ್ಟಿಗೆ ವೈಭವೀಕರಿಸಿ ನಮಗೆ ನಗು ಮತ್ತು Lesson ಒಟ್ಟಿಗೆ ಸಿಗುತ್ತದೆ. ಒಟ್ಟಿನಲ್ಲಿ ಅವರ ದಿಟ್ಟ ನೇರ ನಿರಂತರ ಮಾತಿಗೆ ನಾನು ಮನಸೋತೆ. ನನಗೆ ಅಂದು ದಾರಿ ಸರಿದದ್ದೇ ತಿಳಿಯಲಿಲ್ಲ. ಅವರ ಮಾತು ಕೇಳಿ ಖುಷಿಪಡುವ ಸಂದರ್ಭಗಳು ನನಗೇನೂ ಹೊಸದಲ್ಲ. ಆದರೆ ಈಗ ಮೊದಲಿನಷ್ಟು ಅವಕಾಶಗಳೂ ಇಲ್ಲ. ಅವಕಾಶಗಳು ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ಸಿನಿಮಾ ಥಿಯೇಟರ್ ತಲುಪಿದಾಗ ಅವರು ತಮ್ಮ Car Driver ಗೆ, ಇಲ್ಲಿ ನಡೆಯುತ್ತಿರುವ ನಾಲ್ಕೈದು ಸಿನಿಮಾಗಳಲ್ಲಿ ನಿನಗೆ ಯಾವುದನ್ನು ನೋಡಬೇಕೆಂದು ಇಷ್ಟವೋ ಅದನ್ನು ನೋಡು ಎಂದು ಹೇಳಿ, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲು ಉತ್ಸಾಹ ತೋರಿಸಿದ್ದನ್ನು ನೋಡಿ, ಇಂತಹಾ ಒಳ್ಳೇ ಮನಸ್ಸು ಎಷ್ಟು ಜನರಿಗೆ ಇರಲು ಸಾಧ್ಯ ಅಂತ, ಅವರ ಮನಸ್ಸಿನ ಬಗ್ಗೆ ನನ್ನ ಮನಸ್ಸು ಅವಲೋಕನ ಮಾಡಲಾರಂಭಿಸಿತು. ಇದು ಕೂಡಾ ನನಗೇನೂ ಹೊಸದಲ್ಲ. ಆಗತಾನೇ ಹುಟ್ಟಿದ ಮಗುವಿನಿಂದ ಹಿಡಿದು ಹಣ್ಣು ಹಣ್ಣು ಮುದುಕರ ತನಕ ಎಲ್ಲಾ ವಯಸ್ಸಿನವರನ್ನೂ, ಆ ಎಲ್ಲರಿಗೂ ಖುಷಿಯಾಗುವಂತೆ ವಿಶ್ವಾಸದಿಂದ ಪ್ರೀತಿಯಿಂದ ಸಡಗರದಿಂದ ಮಾತನಾಡಿಸುವ, ಇನ್ನೂ ಸರಿಯಾಗಿ ಹೇಳಬೇಕೆಂದರೆ ಮನಸ್ಸಿನ ತುಂಬಾ Motherly attitude ಅನ್ನು ತುಂಬಿಕೊಂಡಿರುವ ಲತನನ್ನು ಲೆಕ್ಕವಿಡಲಾರದಷ್ಟು ಸಲ ನಾನು ನೋಡಿ ಸಂತೋಷಪಟ್ಟಿದ್ದೇನೆ. ಈ ಅಪರೂಪದ ವ್ಯಕ್ತಿತ್ವದ ಲತಾ ನನಗೆ ತುಂಬಾ ಮೆಚ್ಚಿಗೆ. ಇಂಥಾ ಲತನನ್ನು ನೋಡುವ ಅವಕಾಶ ಈಗೀಗ ನನಗೆ ಮೊದಲಿಗಿಂತ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ಥಿಯೇಟರ್ ಒಳಗೆ ಹೋದಾಗ ಮೆಟ್ಟಿಲುಗಳ ಬದಲು ಈಗಿನ ಕಾಲದಲ್ಲಿ ಇರತ್ತಲ್ಲಾ, ಅದರ ಹೆಸರು ನೆನಪಾಗುತ್ತಿಲ್ಲ, ಆ ತರದ್ದನ್ನು ಹತ್ತಲು ನಾನು ತುಂಬಾ Tension ಮಾಡಿಕೋತೀನಿ. ಲತನ ಹತ್ತಿರ ನನ್ನ Tension ಬಗ್ಗೆ ವಿವರಿಸಬೇಕೆಂದುಕೊಂಡಿದ್ದೆ. ಆದರೆ ಅವರು ಅದಕ್ಕೆ ಅವಕಾಶವೇ ಕೊಡದೇ ನನ್ನ

ಮನಸ್ಸನ್ನು ಅವರಾಗಿಯೇ ಅರಿತುಕೊಂಡು, ಇದನ್ನು ಹತ್ತುವುದು ಹೇಗೆ, ನಮ್ಮ Mind set ಹೇಗಿರಬೇಕು, ಅವರು ಪ್ರಥಮಬಾರಿಗೆ ಹತ್ತುವಾಗ, ಅವರಿಗೂ ಅದರ ಅನುಭವವಿಲ್ಲದಾಗ ಹೇಗೆ ಅದನ್ನು ನಿಭಾಯಿಸಿದರು ಎಂದೆಲ್ಲಾ ನನಗೆ ಅರ್ಥವಾಗುವ ಹಾಗೆ ಪಾಠ ಮಾಡಿದರಾದರೂ, ನನಗೋಸ್ಕರ ಅದು ಬೇಡ, ಲಿಫ್ಟ್ ನಲ್ಲೇ ಹೋಗೋಣ ಬಾ ಎಂದು ಕರೆದುಕೊಂಡು ಹೋದರು. ಇತ್ತೀಚೆಗೆ ಅಮೆರಿಕಾದಿಂದ ನನ್ನಣ್ಣನ ಮಗಳು ದೀಪು ಬಂದಾಗ ಕೂಡಾ ಲತಾ, ಅವಳು, ನಾನು etc.. ಎಲ್ಲರೂ ಸೇರಿ ನಾವು ಚಾಮುಂಡಿ ಬೆಟ್ಟಕ್ಕೆ ಹೋದಾಗ ರಾತ್ರಿಯಾಗಿತ್ತು. ಕಾರಿನಿಂದಿಳಿದು ದೇವಸ್ಥಾನ ತಲುಪುವವರೆಗೂ ಎಲ್ಲೆಲ್ಲಿ ಎತ್ತರ ತಗ್ಗು, ಎತ್ತರದ ಮೆಟ್ಟಿಲುಗಳಿದ್ದವೋ, ಒಟ್ಟಿನಲ್ಲಿ ಎಲ್ಲೆಲ್ಲಿ Careful ಆಗಿ ಹೆಜ್ಜೆ ಇಡಬೇಕಾದ ಜಾಗಗಳಿದ್ದವೋ ಅಲ್ಲೆಲ್ಲಾ ಲತ ನನ್ನ ಕೈ ಹಿಡಿದುಕೊಂಡು, ಜೋಪಾನವಾಗಿ ನಡಿ, ಮೆತ್ತಗೆ ಹೆಜ್ಜೆ ಇಡು ಎಂದೆಲ್ಲಾ ಹೇಳುತ್ತಿದ್ದರು. ಕೋತಿಗಳು ಹತ್ತಿರದಲ್ಲೇ ಇದ್ದಾಗಲೂ ನನ್ನನ್ನು ಹಾಗೇ ಕಾಪಾಡಿದರು. ನನ್ನನ್ನು ಹಾಗೆ ಕಾಪಾಡಲು ಅವರೇನೂ 16 ವರುಷದ ಹುಡುಗಿಯಲ್ಲ, ಅಥವಾ ನನಗಿಂತ ತುಂಬಾ ಚಿಕ್ಕವರಲ್ಲ. ನಾವಿಬ್ಬರೂ ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಆದರೂ ಅವರು ನನ್ನ ಬಗ್ಗೆ ಅಷ್ಟೊಂದು Care ತೆಗೆದುಕೊಂಡರು. ಅದು ಅವರ ಸ್ವಭಾವ. ಇಂತಹ ವಿಶ್ವಾಸದ ವಿಶೇಷ ಕಾಳಜಿ ಇರುವ ಮನಸ್ಸು ಬಹಳ ಅಪರೂಪ. ಇಂತಹಾ ಅನುಭವಗಳು ಕೂಡಾ ನನಗೇನೂ ಹೊಸದಲ್ಲ. ಆದರೆ ಇಂಥಾ ಅವಕಾಶಗಳು ಇತ್ತೀಚೆಗೆ ನನಗೆ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ಥಿಯೇಟರ್ ನಲ್ಲಿ ಇದ್ದ ಅಷ್ಟು ತಿಂಡಿಗಳೂ ನನಗೇ ಕಾಣಿಸುತ್ತಿದ್ದರೂ ಅವರು ವಿಶ್ವಾಸದ ಗುಣದಿಂದ ಪ್ರತೀ ತಿಂಡಿಯನ್ನೂ ನನಗೆ ತೋರಿಸಿ, ಅದರಲ್ಲಿ ನನಗೆ ಏನು ಬೇಕಾದರೂ ತೆಗೆದುಕೋ ಎಂದು ಪದೇ ಪದೇ ಹೇಳುತ್ತಿದ್ದರು. ಕೊನೆಗೆ ನಾನು Select ಮಾಡಿದ Popcorn packet ಅನ್ನು ನೋಡಿ, ಆ Size Cancel ಮಾಡಿಸಿ, ಅತಿ ದೊಡ್ಡ packet ಅನ್ನು Order ಮಾಡಿ ಕೊಡಿಸಿದರು. ಇಂಥಾ ಮನಸ್ಸು ಎಷ್ಟು ಜನಕ್ಕೆ ಬರತ್ತೆ? ಇಂತಹಾ ಸಂದರ್ಭಗಳು ಅವರೊಡನೆ ನಾನು ಅನುಭವಿಸಿರುವುದು ಲೆಕ್ಕವಿಲ್ಲದಷ್ಟು. ಆದರೆ ಇತ್ತೀಚೆಗೆ ನನಗೆ ಅವಕಾಶ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ಸಿನಿಮಾದಲ್ಲಂತೂ ಲೆಕ್ಕವಿಲ್ಲದಷ್ಟು ಸಲ ನಾನು ಲತನ ಜೊತೆ ನಕ್ಕೂ ನಕ್ಕೂ ತುಂಬಾ Enjoy ಮಾಡಿದೆ. ಸಿನಿಮಾದ Wall Poster ಗಳು ಎಲ್ಲೆಲ್ಲೂ ದೊಡ್ಡ ದೊಡ್ಡದಾಗಿ ರಾರಾಜಿಸುತ್ತಿದ್ದವು. ಅವುಗಳು Background ನಲ್ಲಿ ಬರುವಂತೆ ನನ್ನ ಹಾಗೂ ಲತನ Photo ತೆಗೆಯಲು ನಗುತ್ತಾ ಲತ ಅಲ್ಲಿದ್ದವರನ್ನು




Request ಮಾಡಿದರು. ತೆಗೆದುಕೊಟ್ಟವರಿಗೆ ಅತ್ಯಂತ ನಗುಮುಖದಿಂದ ಧನ್ಯವಾದ ಹೇಳಿ ತಕ್ಷಣ ಆ Photo ನನಗೆ Forward ಮಾಡಿದರು. ನಾನು ಸಂಜೆ ಆ Photo ವನ್ನು ಸುನೀತ, ಅಪ್ಪಿ, ಅರ್ಚನ ಎಲ್ಲರಿಗೂ ಸಡಗರದಿಂದ Forward ಮಾಡಿದೆ. ಆಗ ಸುನೀತ ಸಿನಿಮಾ ಹೇಗಿತ್ತು ಅಂತ ಮೆಸೇಜ್ ಮಾಡಿದಳು. ಸಿನಿಮಾ ತುಂಬಾ Enjoy ಮಾಡಬಹುದು, ಆದರೆ ಅದನ್ನು ಲತನ ಜೊತೆ ನೋಡುವುದರಿಂದ ಮಾತ್ರ ಎಂದು ಉತ್ತರಿಸಿದೆ. ಲತನ ಜೊತೆ ನಾನು ಅನೇಕಾನೇಕ ಸಿನಿಮಾಗಳನ್ನು Enjoy ಮಾಡಿದ್ದೇನೆ. ಆದರೆ ಈಗೀಗ ಅವಕಾಶ ಮೊದಲಿಗಿಂತ ಕಡಿಮೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

Interval ನಲ್ಲಿ ನಾನೊಂದು Round ಆಚೆ ಓಡಾಡಿಕೊಂಡು ಬರ್ತೀನಿ ಅಂತ ಹೊರಟೆ. ಲತನಿಗೆ ಆ ದಿನ ಅವರ ಮನೆಯಿಂದ ಹೊರಡುವ ಮೊದಲು ಸ್ವಲ್ಪ ಕಾಲಿಗೆ ಪೆಟ್ಟಾಗಿತ್ತು. ಹಾಗಾಗಿ ಅವರಿಗೆ ತುಂಬಾ ಕಾಲು ನೋವು ಇತ್ತು. ಆ ನೋವಿನಲ್ಲೂ ಅವರು ಒಬ್ಬಳೇ ಯಾಕೆ ಹೋಗುತ್ತೀ, ನಿನಗೆ ಆಗತ್ತಾ, ನಾನೂ ಬರ್ತೀನಿ ಅಂತ ತುಂಬಾ ಕಳಕಳಿ ವ್ಯಕ್ತಪಡಿಸಿದರು, ಮತ್ತದೇ ವಿಶ್ವಾಸದಿಂದ. ನಾನೇ ಆ ನೋವಿನಲ್ಲಿ ಬೇಡ ಎಂದು ಹೇಳಿ, ಒಂದು Round ಹೋಗಿ ಬಂದೆ. ಅವರ ಇಂತಹಾ ಮಾತುಗಳನ್ನು ಕೇಳುವ ಅವಕಾಶ ನನಗೇನೂ ಕಡಿಮೆ ಇರಲಿಲ್ಲ. ಆದರೆ ಇತ್ತೀಚೆಗೆ ನನಗೆ ಅವಕಾಶ ಕಡಿಮೆಯಾಗಿದೆ.

**"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ನಂತರ ಸಿನಿಮಾವನ್ನು ಯಥಾಪ್ರಕಾರ ಅವರ ಜೊತೆ Enjoy ಮಾಡ್ತಾ ನೋಡಿದೆ. ಸಿನಿಮಾ ಮುಗಿದು ಈಚೆ ಬಂದಾಗ ಥಿಯೇಟರ್ ಗೆ Attach ಆಗಿದ್ದ Hotel ನಲ್ಲಿ ಅನೇಕರು Coffee, Snacks ತೆಗೆದುಕೊಳ್ಳುತ್ತಾ ಇದ್ದರು. ಅದನ್ನು ತೋರಿಸಿ, ಲತ, ನೀನೂ ಏನಾದರೂ ತೆಗೆದುಕೋ ನಿನಗೆ ಇಷ್ಟವಾದದ್ದು, ಇಲ್ಲಿ ಇಷ್ಟ ಇಲ್ಲದಿದ್ದರೆ ಬೇರೆ ಕಡೆ ಬೇಕಾದರೂ ಹೋಗೋಣ ಅಂತ ಮತ್ತೆ ಮತ್ತೆ ತುಂಬಾ ವಿಶ್ವಾಸದಿಂದ ಕೇಳಿದರು. ಅಲ್ಲೇ ಇದ್ದ ಅಂಗಡಿಗಳಲ್ಲಿ ಕಾಣುತ್ತಿದ್ದ ಹೊಸ ಹೊಸ ಬಣ್ಣ ಬಣ್ಣದ ನೈಟಿಗಳನ್ನು ತೋರಿಸಿ, ತೊಗೋ ಅಂತ ಹೇಳಿದರು, ಅದೇ ಪ್ರೀತಿಯಿಂದ. ಅವರು ಹೀಗೆಲ್ಲಾ ಹೇಳುವುದು, ಕೊಡಿಸುವುದು, ಯಾವುದೂ ನನಗೆ ಹೊಸದಲ್ಲ. ಆದರೆ ಇತ್ತೀಚೆಗೆ ಇಂತಹಾ ಅವಕಾಶ ನನಗೆ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ಇನ್ನೊಂದು ತುಂಬಾ ವಿಶೇಷವಾದ Point ಅಂದ್ರೆ, Car ಗಾಗಿ Outdoor ನಲ್ಲಿ ಕಾಯ್ತಾ ಕುಳಿತಿದ್ದೆವು. ಸಿನಿಮಾ ಬಗ್ಗೆ ಚರ್ಚೆ ಮಾಡ್ತಾ ಇದ್ದೆವು. ಲತನ ಜೊತೆ ವಿಮರ್ಶೆ, ಚರ್ಚೆ ತುಂಬಾ ಚೆನ್ನಾಗಿರತ್ತೆ. ಧರ್ಮೇಂದ್ರನ ಸಾವು ಇಡೀ ಸಿನಿಮಾದಲ್ಲಿ ಬೇಜಾರಿನ ದೃಶ್ಯ ಎಂದು ಹೇಳಿದರು. ನನಗೆ ಬೇಜಾರಾಯಿತಾ ಅಂತ ಬೇರೆ ಪ್ರೀತಿಯಿಂದ ವಿಚಾರಿಸಿದರು. ಅಯ್ಯೋ ಲತಾ ಅದು ಸಿನಿಮಾ ಕಥೆ, ಎಂದೆ. ಆದರೂ ಅವರು ತುಂಬಾ Sympathy ವ್ಯಕ್ತಪಡಿಸಿದ ರೀತಿ ಅವರ ಒಳ್ಳೆಯ ಮನಸ್ಸನ್ನು ಪ್ರತಿಬಿಂಬಿಸುವಂತಿತ್ತು. ಕಥೆಗೆ ಅದು ಸೂಕ್ತವಾಗಿತ್ತು ಅಂತ ನಾನೇ ಅವರಿಗೆ ಹೇಳಬೇಕಾಯಿತು. ಧರ್ಮೇಂದ್ರ ಬದುಕಿದ್ದು, ಶಬಾನಾ ಅಜ್ಮಿ ಜೊತೆ ಸ್ನೇಹ ಮುಂದುವರಿಸಿದರೆ ಅದು Family ಗೌರವಕ್ಕೆ ಧಕ್ಕೆ ತರುತ್ತಿತ್ತು, ಎಂದು ಹೀಗೆಲ್ಲಾ ಲತನ ಜೊತೆ ಸಿನಿಮಾ ಬಗ್ಗೆ ಚರ್ಚೆ ಶುರು ಮಾಡಿದೆ. ಲತನ ಜೊತೆ ಸಿನಿಮಾ ಬಗ್ಗೆ ಚರ್ಚಿಸುವುದು ನನಗೆ ತುಂಬಾ ಇಷ್ಟವಾದ ಕೆಲಸ. ಇದೇನೂ ನನಗೆ ಹೊಸದಲ್ಲ. ಆದರೆ ಇತ್ತೀಚೆಗೆ ಇಂತಹಾ ಅವಕಾಶಗಳು ನನಗೆ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ** circumstance **ಸರಿಯಿಲ್ಲ".**

ನಮ್ಮ ಮನೆಮುಂದೆ ಕಾರಿನಿಂದ ಇಳಿದಾಗ ಅವರು ನಗುನಗುತ್ತಾ ಪ್ರೀತಿಯಿಂದ, ಸಿನಿಮಾಗೆ ಬಂದಿದ್ದಕ್ಕೆ Thank you ಸಂಧ್ಯಾ ಎಂದು ಹೇಳಿದರು. ಕೈ ಯಾಂತ್ರಿಕವಾಗಿ ಟಾ ಟಾ ಮಾಡಿದರೂ ಮನಸ್ಸಿನಿಂದ ನಾನು ಮೂಕಳಾಗಿದ್ದೆ. ಕಾರಣ ಸಿನಿಮಾಗೆ ಬರ್ತೀಯಾ ಅಂತ ಕೇಳಿದ್ದರಿಂದ ಹಿಡಿದು, ವಾಪಸ್ಸು ನನ್ನನ್ನು ಮನೆಗೆ ಕರೆದುಕೊಂಡು ಬರುವತನಕ ನನ್ನ ಬಗ್ಗೆ ಪ್ರೀತಿ, ಕಾಳಜಿ ತೋರಿಸಿದ್ದು ಲತಾ. ಆದರೆ ನನಗೇ Thanks ಹೇಳ್ತಾಇದ್ದಾರೆ ಅಂದ್ರೆ, ಇವರ ಹೃದಯದ ವೈಶಾಲ್ಯತೆ ಎಷ್ಟಿರಬಹುದೆಂದು

ಅಳೆಯಲು ಸಾಧ್ಯವೇ? ಇಂತಹಾ ಇವರ ಒಡನಾಟ ನನಗೇನೂ ಹೊಸದಲ್ಲ. ಆದರೆ ಇತ್ತೀಚೆಗೆ ಸ್ವಲ್ಪ ಕಡಿಮೆಯಾಗಿದೆ. **"ಕಾರಣ ಲತಾ ಅಲ್ಲ, ನನ್ನ circumstance ಸರಿಯಿಲ್ಲ".**

ಮುಖ್ಯವಾದ ವಿಷಯ ಎಂದರೆ, ಲತನ ಪಾಲಿಗೆ ನನ್ನಂತಹವರು ಅನೇಕಾನೇಕ ಜನರಿದ್ದಾರೆ. ಆದರೆ ನನ್ನ ಪಾಲಿಗೆ? ಲತನ ಜೊತೆ ಸ್ನೇಹ, ಸಂಬಂಧ, ಅನುಬಂಧ, ಪ್ರೀತಿ, ವಿಶ್ವಾಸ, ಹೊಂದಿರುವ ಎಲ್ಲರನ್ನೂ ಗಣನೆಗೆ ತೆಗೆದುಕೊಂಡರೂ, ಸುಲಭವಾಗಿ ತಕ್ಷಣ ಮನಸ್ಸಿನಲ್ಲಿ ಮೂಡುವ ಪ್ರಶ್ನೆ, ನಮ್ಮ ಪಾಲಿಗೆ ಲತನಂತಹವರು ಎಷ್ಟು ಜನ ಇದಾರೆ ಎಂದು. ಯಾವ ಸಂಶಯವೂ ಇಲ್ಲದೆ ನಾವೆಲ್ಲರೂ ಕೊಡಬಹುದಾದ ಉತ್ತರ **"ಲತಾ ನಮ್ಮೆಲ್ಲರ ಪಾಲಿಗೂ ಆ ಭಗವಂತ ಕೊಟ್ಟ ವರ".**

ವರ ಎಂದಕೂಡಲೇ ನನಗೆ ನೆನಪಾಗುತ್ತಿದೆ "**ದೇವರು ವರ ಕೊಟ್ರೂ ಪೂಜಾರಿ ವರ ಕೊಡಲ್ಲ**" ಅನ್ನೋ ಗಾದೆ. ಗಾದೆ ಜ್ಞಾಪಕಕ್ಕೆ ಬಂದ ಕಾರಣ ಏನು ಅಂತೀರಾ? ಲತನ ಜೊತೆ ಸಿನಿಮಾಗೆ ಹೋದಾಗ ಆದ ಸುಂದರ ಅನುಭವವೇ ಕಾರಣ. ಯಾಕೆ? ಲತನ ಜೊತೆ ಹಾಗಾದರೆ ಸಿನಿಮಾ ನೋಡಿದ್ದು ಇದೇ ಪ್ರಥಮ ಬಾರಿ ಅಲ್ಲವಲ್ಲಾ ಅಂತ ಅಂದ್ಕೋತಿದೀರಾ? ಖಂಡಿತಾ ಅಲ್ಲ. ನಾನು ನೋಡಿರುವ ಸಿನಿಮಾಗಳಲ್ಲಿ More than 95% ನಾನು ನೋಡಿರುವುದೇ ಲತನ ಜೊತೆಯಲ್ಲಿ. 5% ಮಾತ್ರ ಇತರರೊಡನೆ ನೋಡಿದ್ದೇನೆ. ಬರೀ ಸಿನಿಮಾ ಮಾತ್ರ ಅಲ್ಲ, K.R.S, ಶ್ರೀರಂಗಪಟ್ಟಣ, ನಂಜನಗೂಡು, ಚಾಮುಂಡಿಬೆಟ್ಟ, ನಿಮಿಷಾಂಬಾ, ಸಚ್ಚಿದಾನಂದ ಆಶ್ರಮ, ಶಾರದಾದೇವಿ ಗುಡಿ, ಆಂಜನೇಯನ ಗುಡಿ, ಈಶ್ವರನ ಗುಡಿ, ಮೈಸೂರಿನ ಅರಮನೆ, Zoo, Flower Show, ದಸರಾ Exhibition, ಮುಂತಾದ ಅನೇಕ ಸ್ಥಳಗಳಿಗೆ ಲೆಕ್ಕವಿಲ್ಲದಷ್ಟು ಸಲ ನನ್ನನ್ನು ಕರೆದುಕೊಂಡು ಹೋಗಿರುವುದೇ ಲತ. ನನ್ನ ಜೀವನದಲ್ಲಿ ನಾನು, ಲೆಕ್ಕವಿಲ್ಲದಷ್ಟು ಸಲಿ ಮನಸಾರೆ ನಕ್ಕಿರುವುದೂ ಸಹ ಲತನ ಜೊತೆಯಲ್ಲಿ ಮಾತ್ರ. ಇದೆಲ್ಲವೂ ನನ್ನ ನೆನಪಿನ ಬುತ್ತಿಯಲ್ಲಿ ಸದಾ ಅಮರ. ಇಷ್ಟೆಲ್ಲಾ ಇದ್ದಮೇಲೆ "Rocky our Rani" ಗೆ ಹೊಗಿದ್ದನ್ನು ಮಾತ್ರ ಏಕೆ ವಿಶೇಷವಾಗಿ ಬರೆದಿದ್ದೇನೆ ಎಂಬ ಪ್ರಶ್ನೆ ನಿಮಗೆ ಕಾಡುತ್ತಿರಬಹುದು. ಅದಕ್ಕೆ ಕಾರಣವೇನೆಂದರೆ, ನಾನು ಸುಮಾರು 11 ವರುಷದ ಹುಡುಗಿಯಾಗಿದ್ದಾಗಿನಿಂದ ಹಿಡಿದು, 60 ವರುಷದ ಮುದುಕಿಯಾಗುವವರೆಗೂ ನನಗೆ ನಿರಂತರವಾಗಿ ಲತನ ಒಡನಾಟದ ಭಾಗ್ಯ ಸಿಕ್ಕಿತ್ತು. ನಂತರ ಕರೋನ ಕಾರಣದಿಂದ ಅನಿವಾರ್ಯವಾಗಿ ಸ್ವಲ್ಪ ಕಡಿಮೆಯಾಯಿತು. ಅನಂತರ ವೃತ್ತಿ ಜೀವನದಿಂದ ನಿವೃತ್ತಿ ಹೊಂದಿದರೂ,

ಹಿಂದಿನ ದಿನಗಳಿಗೆ ಹೋಲಿಸಿಕೊಂಡು ನೋಡಿದಾಗ, ಇಂದಿನ ದಿನಗಳಲ್ಲಿನ ಅವರ ಜೊತೆ ಒಡನಾಟ ಸ್ವಲ್ಪ ಕಡಿಮೆಯಾಯಿತು. ಇದಕ್ಕೆ **"ಕಾರಣ ಲತ ಅಲ್ಲ. ಬದಲಾದ ನನ್ನ** circumstance".

ಲತ ಮಾತ್ರ ಪ್ರೀತಿಯಿಂದ ಎಲ್ಲಿಗೆ ಬೇಕಾದರೂ ಕರೆದುಕೊಂಡು ಹೋಗಲು ಇಂದಿಗೂ ಸದಾ ಸಿದ್ಧರಾಗಿದ್ದಾರೆ. ಆದ್ದರಿಂದ ಈ ಸಿನಿಮಾಗೆ ಹೋದ ದಿನ, ಹಳೆಯದೆಲ್ಲವೂ ಒಟ್ಟಿಗೆ ನೆನಪಾಗಿ, ನನ್ನ ಇಡೀ ಜೀವನದ ಲತನ ಜೊತೆಯ ಒಡನಾಟ ನೆನಪಾಗಿ, ಲತನ ಸಾಂಗತ್ಯದಂತಾ Golden Opportunity ಭಗವಂತ ನನಗೆ ಕೊಟ್ಟ ವರ ಎಂದೆನಿಸಿತು. ಒಟ್ಟಿನಲ್ಲಿ ಹೇಳುವುದಾದರೆ, "**ಲತ ದೇವರು ನನಗೆ ಕೊಟ್ಟ ವರ"**. ಆದರೆ ವರ ಕೊಡದ ಪೂಜಾರಿ ಎಂದರೆ "**ಬದಲಾದ ನನ್ನ** circumstance", ಎನಿಸಿತು**.**

ಸಾಮಾನ್ಯವಾಗಿ ಕಥೆ, ಕಾದಂಬರಿ, ಲೇಖನಗಳಲ್ಲಿ ಯಾವ ವಾಕ್ಯವೂ Repeat ಆಗಿರುವುದಿಲ್ಲ. ಇಷ್ಟೂ ಗೊತ್ತಿಲ್ಲದೆ ಲೇಖನ ಬರೆಯುತ್ತಿದ್ದೇನೆ ಎಂದುಕೊಂಡಿರಾ? ಇದು ಖಂಡಿತಾ ಲೇಖನ ಅಲ್ಲ. ನನ್ನ ಮನಸ್ಸಿನ ಭಾವನೆಯನ್ನು ನಿಮ್ಮಲ್ಲಿ ತೋಡಿಕೊಂಡಿದ್ದೇನೆ ಅಷ್ಟೆ. ಆದರೂ ಇಲ್ಲಿ, **ನನ್ನ** circumstance **ಸರಿಯಿಲ್ಲ** ಎನ್ನುವ ವಾಕ್ಯವನ್ನು ತುಂಬಾ ಸಲಿ Repeat ಮಾಡಿದ್ದೀನಿ ಎಂದು ನಿಮಗೆ ಅನಿಸುತ್ತಿದೆಯೇ? ಆದರೆ ಇದನ್ನು ಹೇಳುವಾಗ ನನಗೆ, ನಾನು ಓದಿದ ಕೆಲವು ಸಾಲುಗಳು ನೆನಪಾದವು. ಆ ಸಾಲುಗಳು ನೆನಪಾದಾಗ ನನ್ನ ಮನಸ್ಸೇ ನನ್ನ ಕೆನ್ನೆಗೆ ಛಟೀರ್ ಎಂದು ಹೊಡೆದಂತಾಯಿತು. ನಾನು ಓದಿದ ಸಾಲುಗಳೇನು ಅಂತೀರಾ? ಅದನ್ನು ಹೇಳುವ ಮೊದಲು ಅದು ಸಿಕ್ಕಿದ್ದು ಎಲ್ಲಿ ಅಂತ ಹೇಳ್ತೀನಿ. ಬಹಳ ವರ್ಷಗಳ ಹಿಂದೆ ಲತನ ಮನೆಯಲ್ಲೇ, ಲತನ ಡೈರಿಯಲ್ಲೇ, ಲತನ ಮುದ್ದಾದ ಕೈ ಬರಹದಲ್ಲೇ, ಲತ ಬರೆದಿಟ್ಟುಕೊಂಡಿದ್ದನ್ನು ಲತಾನೇ ನನಗೆ ತೋರಿಸಿದ್ದರು. ಅದ್ಯಾಕೋ ಅಪ್ರಯತ್ನವಾಗಿ ಆ ಸಾಲುಗಳು ನನಗೆ ನೆನಪಾದವು. ಆ ಸಾಲುಗಳು ಏನೆಂಬ ಕುತೂಹಲ ನಿಮಗೆ ಕಾಡುತ್ತಿದೆಯೇ?

ಹೇಳೇಬಿಡುತ್ತೇನೆ ಕೇಳಿ**.**

"Weak people will always blame either the circumstance or other people for their own failures."

Circumstance ಕಥೆ ಇರಲಿ, ಇನ್ನೊಂದು ವಿಷಯ ಈ ಸಂದರ್ಭದಲ್ಲಿ ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ನಮ್ಮೆಲ್ಲರ ಚಿರಪರಿಚಿತ ಹಾಗೂ ಲತ ಹುಟ್ಟುಹಾಕಿದ ಅದ್ಭುತ ಕಾರ್ಯಕ್ರಮ ನಾದಾರ್ಚನೆಯಲ್ಲಿ ಲತ ಹೇಳಿರುವ ಹಿಂದಿ ಹಾಡುಗಳು ಅನೇಕ. ಅದರಲ್ಲಿ ಒಂದು ಹಾಡು, ಅದು ಯಾವ ಹಾಡು ಅಂತ ಈಗ ನೆನಪಾಗುತ್ತಿಲ್ಲ, ಆದರೆ ಆ ಒಂದು ಹಾಡಿನ ಒಂದು ಸಾಲು ಮಾತ್ರಾ ನನ್ನ ನೆನಪಿನಿಂದ

ಮಾಸುವುದೇ ಇಲ್ಲ. ಅಷ್ಟೇ ಅಲ್ಲ, ಲತನ ಧ್ವನಿಯಲ್ಲೇ ನನಗೆ ಕೇಳಿಸುತ್ತಲೇ ಇರುತ್ತದೆ. ಲತಾ ಅದನ್ನು ನನಗಾಗೇ ಹೇಳುತ್ತಿದ್ದಾರೇನೋ ಎನಿಸುತ್ತಿರುತ್ತದೆ ಹಾಗೂ ಸಂತೋಷ ಆಗುತ್ತಿರುತ್ತದೆ. ಲತನ ವಿಶ್ವಾಸಿಗಳ ಸಂಖ್ಯೆ ಅಪಾರ. ಅವರಲ್ಲಿ ಯಾರು ಬೇಕಾದರೂ ಆ ಹಾಡು ಯಾವುದು ಅಂತ ಲತನನ್ನು ಕೇಳಿ, ಆ ಹಾಡನ್ನು ಅವರಿಂದ ಹಾಡಿಸಿ ಕೇಳಿದರೆ, ನಿಮಗೂ ನನ್ನ ಅನುಭವವೇ ಆಗುತ್ತದೆ ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ. ಆ ಸಾಲುಗಳು ಯಾವುದು ಗೊತ್ತೇ?

**"ಗಗನ್ ಸೆ ಭೀ ಊಂಛಾ ಮೇರಾ ಪ್ಯಾರ್ ಹೈ"**

